(ಇಂದು ದಿನಾಂಕ 28-02-2019 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಪಾಟೀ ಸವಾಲು ಃ 3ನೇ ಪ್ರತಿವಾದಿ ಪರ ಶ್ರೀ ಎಸ್.ಜಿ.ಎಸ್. ವಕೀಲರಿಂದ**

1. ದಾವಾ 'ಬ' ಮನೆ ಆಸ್ತಿ ನನ್ನ ತಂದೆಯ ಕಾಲದಲ್ಲಿ ಇದ್ದಿರಲಿಲ್ಲ. ನನ್ನ ತಂದೆಯ ಕಾಲದಲ್ಲಿ ಇದ್ದ ಇಮಾರತನ್ನು ಕೆಡವಲಾಗಿತ್ತು. ದಾವಾ 'ಬ' ಮನೆ ದೊಡ್ಡ ಇಮಾರತಿನ ಭಾಗ ಮತ್ತು ಇನ್ನೊಂದು ಭಾಗದಲ್ಲಿ ನಮ್ಮ ದಾಯಾದಿಗಳು ವಾಸವಿದ್ದಾರೆ ಎಂದರೆ ಸರಿ. ನಮ್ಮ ಮತ್ತು ದಾಯಾದಿಗಳ ಇಮಾರತುಗಳ ಗೋಡೆ ಒಂದೇ ಇರುತ್ತದೆ. ನಮ್ಮ ದಾಯಾದಿಗಳು ಸದ್ರಿ ಮೂಲ ಮನೆಯ ಕುರಿತು ಮೂ.ದಾ. ನಂ. 96/1991 ರಂತೆ ದಾವೆಯನ್ನು ಸಲ್ಲಿಸಿದ್ದರು ಎಂದರೆ ಸರಿ. ಸದ್ರಿ ದಾವೆಯಲ್ಲಿ ನನ್ನ ತಂದೆ ಆಳಿದು ಬೀಳುವ ಮನೆಯನ್ನು ದುರಸ್ತಿ ಮಾಡುವದಾಗಿ ಸಾಧನೆ ಮಾಡಿದ್ದರು ಎಂದರೆ ಸರಿ. ಸದ್ರಿ ದಾವೆಯನ್ನು ಪರಮೇಶ್ವರ ಶಿವರಾಮ ಭಟ್ಟ ಸಲ್ಲಿಸಿದ್ದನು ಎಂದರೆ ಸರಿ. ಪರಮೇಶ್ವರ ಶಿವರಾಮ ಭಟ್ಟ ಮತ್ತು ನಮ್ಮ ತಂದೆ ವಾಸವಿದ್ದ ಮನೆಯ ಗೋಡೆ ಒಂದೇ ಆಗಿತ್ತು ಎಂದರೆ ಸರಿ. ಸದ್ರಿ ಮನೆ 100 ವರ್ಷಕ್ಕಿಂತಲೂ ಹಿಂದಿನ ಮನೆಯಾಗಿತ್ತು, ಅದಕ್ಕೆ ಹಂಚಿನ ಛಾವಣಿ ಇತ್ತು. ಸದ್ರಿ ಮನೆಯನ್ನು ನನ್ನ ತಂದೆ ದುರಸ್ತಿ ಮಾಡಲು ಪ್ರಯತ್ನಿಸಿದಾಗ ಮೂ. ದಾ. ನಂ. 96/1991 ನ್ನು ದಾಖಲಿಸಲಾಯಿತು ಎಂದರೆ ಸರಿ. ಸದ್ರಿ ದಾವೆ ಕಿತ್ತು ಹಾಕಲಾಯಿತು ಎಂದರೆ ಸರಿ. ಅದರ ವಿರುದ್ಧ ಪರಮೇಶ್ವರ ಶಿವರಾಮ ಭಟ್ಟ ಆರ್, ಎ. ನಂ. 145/2006 ರಂತೆ ಮೇಲ್ಮನವಿ ಸಲ್ಲಿಸಿದ್ದರು ಎಂದರೆ ಸರಿ. ಸದ್ರಿ ಮೇಲ್ಮನವಿ ಚವಕಶಿಯಲ್ಲಿ ಇರುವಾಗ ನನ್ನ ತಂದೆ ಮೃತಪಟ್ಟರು ಎಂದರೆ ಸರಿ. ಆ ಬಳಿಕ ನನ್ನನ್ನು ಮತ್ತು ಉಳಿದ ಪ್ರತಿವಾದಿಯರನ್ನು ವಾರಸುದಾರರನ್ನಾಗಿ ಮೇಲ್ಮನವಿಯಲ್ಲಿ ಸೇರ್ಪಡೆ ಮಾಡಲಾಯಿತು ಎಂದರೆ ಸರಿ. ನಾನು ಯಾವತ್ತೂ 3ನೇ ಪ್ರತಿವಾದಿ ಪರವಾಗಿ ಮೊಕ್ತಾರುನಾಮೆಯನ್ನು ಬರೆದುಕೊಟ್ಟಿಲ್ಲ. ಸದ್ರಿ ಮೇಲ್ಮನವಿ ಯಾವಾಗ ನಿಖಾಲೆಯಾಗಿದೆ

ಎಂದು ನನಗೆ ಗೊತ್ತಿಲ್ಲ. ಸದ್ರಿ ಮೇಲ್ಮನವಿಯಲ್ಲಿ ಏನು ನಡವಳಿಕೆ ಆಗಿದೆ ಎಂದು ನನಗೆ ಗೊತ್ತಿಲ್ಲ. ಸದ್ರಿ ಮೇಲ್ಮನವಿಯಲ್ಲಿ ನ್ಯಾ.ದ ಆಯುಕ್ತರು ನೇಮಕವಾದ ವಿಷಯ ನನಗೆ ಗೊತ್ತಿಲ್ಲ. ದಾವಾ 'ಬ' ಮನೆಯನ್ನು ಯಾರು ಯಾವಾಗ ಕಟ್ಟಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಅದಕ್ಕೆ ಎಷ್ಟು ಖರ್ಚು ಆಗಿದೆ ಎಂದು ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ನಾವು ಕೂಡ 3ನೇ ಪ್ರತಿವಾದಿಗೆ ಖರ್ಚಿನ ಬಾಬ್ತು ದುಡ್ಡು ನೀಡಿದ್ದೇವೆ ಎಂದು ನುಡಿಯುತ್ತಾರೆ. ನಾವು ಎಷ್ಟು ದುಡ್ಡು ನೀಡಿದ್ದೇವೆ ಎಂದು ದಾಖಲೆ ಇಲ್ಲ.

**(ಈ ಹಂತದಲ್ಲಿ 3ನೇ ಪ್ರತಿವಾದಿ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ನೀಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಪ್ರಧಾನ ಸಿವಿಲ್ ಜಡ್ಜ ಕುಮಟಾ